ಮಧುಗಿರಿ ತಾಲ್ಲೂಕಿನಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಈ ಕೆಳಕಂಡಂತಿದೆ

ತಾಲ್ಲೂಕು	ಪಟ್ಟಣ ಪ್ರದೇಶ	ಗ್ರಾಮಾಂತರ ಪ್ರದೇಶ	ಒಟ್ಟು
ಮಧುಗಿರಿ	11	114	125

ಇದರಂತೆ ನಗರ ಪ್ರದೇಶದಲ್ಲಿ 475 ಪಡಿತರ ಚೀಟಿಗಳಿಗೆ ಒಂದು ನ್ಯಾಯಬೆಲೆ ಅಂಗಡಿ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 601 ಪಡಿತರ ಚೀಟಿಗಳಿಗೆ ಒಂದು ನ್ಯಾಯಬೆಲೆ ಅಂಗಡಿ ಪ್ರಸ್ತುತ ಚಾಲ್ತಿಯಲ್ಲಿವೆ.

ವೆನ್‌ಲಾಕ್ ಮತ್ತು ಲೇಡಿಗೋಷನ್ ಆಸ್ಪತ್ರೆಗಳು

1624(1435); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ಮಂಗಳೂರು ವೆನ್‌ಲಾಕ್ ಮತ್ತು ಲೇಡಿಗೋಶನ್ ಆಸ್ಪತ್ರೆಗಳಲ್ಲಿ ಖಾಸಗಿ ವೈದ್ಯಕೀಯ ಕಾಲೇಜು ಆಗಿರುವ ಕೆ.ಎಂ.ಸಿ. ಮಣಿಪಾಲ ಇವರು ಬೋಧನಾ ಫೆಸಿಲಿಟಿ ಪಡೆಯಲು ಮೂಲ ಒಪ್ಪಂದವನ್ನು ಮಾಡಿಕೊಂಡಿದೆಯೇ ಹಾಗೂ ಹೊಸದಾಗಿ ನವೀಕರಣ ಯಾವಾಗ ಮಾಡಲಾಗಿದೆ (ಒಪ್ಪಂದ ಪ್ರತಿಗಳನ್ನು ಒದಗಿಸುವುದು);

ಆ) ಮೂಲ ಒಪ್ಪಂದದ ಪ್ರಕಾರ ಮುಖ್ಯ ಷರತ್ತುಗಳು ಯಾವುವು; ನವೀಕರಣಗೊಳಿಸಿರುವ ಒಪ್ಪಂದದಲ್ಲಿ ಮುಖ್ಯ ಷರತ್ತುಗಳು ಏನು;

ಇ) ಮೂಲ ಒಪ್ಪಂದದಲ್ಲಿರುವ ಯಾವ ಷರತ್ತುಗಳನ್ನು ಕೆ.ಎಂ.ಸಿ. ಈವರೆಗೆ ಪಾಲಿಸಿರುವುದಿಲ್ಲ ನವೀಕರಣಗೊಳಿಸಿದ ಒಪ್ಪಂದದಲ್ಲಿರುವ ಯಾವ ಷರತ್ತುಗಳನ್ನು ಈವರೆಗೆ ಪೂರ್ಣಗೊಳಿಸಿರುವುದಿಲ್ಲ;

ಈ) ಖಾಸಗಿ ವೈದ್ಯಕೀಯ ಕಾಲೇಜು ಈ ಒಪ್ಪಂದದಿಂದ ಈ ಸರಕಾರದ ವ್ಯವಸ್ಥೆಯನ್ನು exploit ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ರದ್ದುಪಡಿಸಿ ಸರಕಾರವೇ ವೈದ್ಯಕೀಯ ಕಾಲೇಜುನ್ನು ಆರಂಭಮಾಡಿ, ಈ ಸೌಲಭ್ಯವನ್ನು ಒದಗಿಸಲಾಗುವುದೇ?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೆಲ್ತ್ ಎಜುಕೇಶನ್ ಆಂಡ್ ಲೋಕಲ್ ಆಡ್ಮಿನಿಸ್ಟ್ರೇಶನ್ ಡಿಪಾರ್ಟ್‌ಮೆಂಟ್ ಆಫ್ ಮದ್ರಾಸ್ ಸರ್ಕಾರದ ಆದೇಶ ಎಂ.ಎ ಸಂಖ್ಯೆ:3425/ಹೆಲ್ತ್ ದಿ:20.12.1954ರಲ್ಲಿ ಆದ ಆದೇಶದಂತೆ ಮೂಲ ಒಪ್ಪಂದವಾಗಿರುತ್ತದೆ.

ಆದರೆ ಹೊಸದಾಗಿ ನವೀಕರಣ ಮಾಡಿರುವುದಿಲ್ಲ.

ಆ) ಮೂಲ ಒಪ್ಪಂದದಲ್ಲಿ ಷರತ್ತುಗಳು:

- ಸರ್ಕಾರದ ಆದೇಶದಂತೆ ಶುಲ್ಕ ಪಾವತಿಸಿದ ನಂತರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಈ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯ ನೀಡುವುದು.
- ಕೆಎಂಸಿ ವತಿಯಿಂದ ಎಲ್ಲಾ ವಿಭಾಗದ ತಜ್ಞ ವೈದ್ಯರ ಸೇವೆಯನ್ನು ಪಡೆಯುವ ಬಗ್ಗೆ ಗೌರವ/ಸಹಾಯಕ ವೈದ್ಯಾಧಿಕಾರಿ ನೇಮಕ. (ಕೆಎಂಸಿ ವತಿಯಿಂದ ವೇತನ ಪಾವತಿ)

ಆದರೆ ಹೊಸದಾಗಿ ನವೀಕರಣ ಒಪ್ಪಂದ ಮಾಡಿಕೊಂಡಿರುವುದಿಲ್ಲ. ಆದರೂ ದಿ:11.01.2010 ರಂದು ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಆರ್‌ಎಪಿಸಿಸಿ ಸಭಾಂಗಣದಲ್ಲಿ ಅಂದಿನ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಾದ ಅಧ್ಯಕ್ಷತೆಯಲ್ಲಿ ನಡೆಸಲಾದ ಸಭೆಯ ನಡವಳಿಯಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಸೂಚಿಸಲಾಗಿತ್ತು. ಅದರಂತೆ ಈ ಎಲ್ಲಾ ಸೌಲಭ್ಯಗಳನ್ನು ಪೂರೈಸಿರುತ್ತಾರೆ.

- ಗ್ರೂಪ್ ಡಿ ನೌಕರರ ಕೊರತೆಯನ್ನು ನಿವಾರಿಸುವುದು:–125 ಮಂದಿ ನೌಕರರನ್ನು ಕೆಎಂಸಿ ವತಿಯಿಂದ ನೇಮಿಸಿರುತ್ತಾರೆ.
- ಶುಶ್ರೂಷಕರ ಕೊರತೆ:–50 ಶುಶ್ರೂಷಕರನ್ನು ಕೆಎಂಸಿ ವತಿಯಿಂದ ನೇಮಿಸಿರುತ್ತಾರೆ.
- ಯಂತ್ರೋಪಕರಣಗಳ ನಿರ್ವಹಣೆ
- ಟೆಕ್ನಿಷಿಯನ್ ಹುದ್ದೆಗಳ ಕೊರತೆ:– ಎಕ್ಸರೇ ತಂತ್ರಜ್ಞ, ಮೆಡಿಕಲ್ ರೇಕಾರ್ಡ್ ಟೆಕ್ನಿಷಿಯನ್ ಲ್ಯಾಬ್ ಟೆಕ್ನಿಷಿಯನ್ ಕೆಎಂಸಿ ವತಿಯಿಂದ ನೇಮಿಸಿರುತ್ತಾರೆ.
- ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಗಣಕೀಕರಣಗೊಳಿಸಿರುತ್ತಾರೆ. ಉದಾ: ವೈದ್ಯಕೀಯ ದಾಖಲೆ ವಿಭಾಗ
- ಈ ಆಸ್ಪತ್ರೆಯಲ್ಲಿ ಡೆಮಾನ್‌ಸ್ಟ್ರೇಶನ್ ಕೊಠಡಿ ಹಾಗೂ ಪ್ರಯೋಗಾಲಯ ನಿರ್ಮಾಣ
- ಈ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಫೀ ಹಣವನ್ನು ಶೇಕಡ 25ರಷ್ಟು ಮುಂಗಡವಾಗಿ ಪಾವತಿಸಿ, ಸದರಿ ಮೊತ್ತದಿಂದ 50,000 ಚದರ ಅಡಿ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಿರುವುದಿಲ್ಲ. ಆದರೆ ಶೇಕಡ 100 ರಷ್ಟು ಕ್ಲಿನಿಕಲ್ ಫೀ ಹಣವನ್ನು ಸಂಸ್ಥೆಯವರು ಆಸ್ಪತ್ರೆಗೆ ಪಾವತಿ ಮಾಡುತ್ತಿದ್ದಾರೆ.

ಇ) ಮೂಲ ಒಪ್ಪಂದದಂತೆ ಎಲ್ಲಾ ಷರತ್ತುಗಳನ್ನು ಹಾಗೂ ದಿನಾಂಕ:11.01.2010ರ ಸಭೆಯಲ್ಲಿ ಕೋರಿ ಕೊಂಡ ಎಲ್ಲಾ ಸೌಲಭ್ಯಗಳನ್ನು ಪೂರೈಸಿರುತ್ತಾರೆ.

ಈ) ಬಂದಿಲ್ಲ